ನಿಂಕೆ' ಎಂದು ಇಡೀ ಹಳ್ಳಿಗೆ ಕೇಳಿಸುವ ಹಾಗೆ ನುಡಿದಿದ್ದಳು. ಸೊಸೆಯ ಆ ಪಾಟಿ ವರಸೆಯನ್ನು ಕಂಡು ನಂಜಮ್ಮ ದಂಗಾಗಿದ್ದಳು. ಬಹುಶಃ ತನ್ನ ಜೀವನದಲ್ಲಿ ಮೊದಲ ಬಾರಿಗೆ ಎಂಬಂತೆ ಸುಮಾರು ಹತ್ತು ನಿಮಿಷಗಳ ಕಾಲ ಪ್ರತಿ ನುಡಿಯದೆ ಸುಮ್ಮನಾಗಿದ್ದಳು. ಅದೇ ಸಮಯಕ್ಕೆ ಅಲ್ಲಿಗೆ ಬಂದಿದ್ದ ನಾರಾಯಣಪ್ಪ ನಂಜಮ್ಮನ ಸೊಸೆಗೆ ಸಮಜಾಯಿಷಿ ನೀಡಲು ಮುಂದಾಗಿದ್ದ.



ಆಗ ನಂಜಮ್ಮ ನಾರಾಯಣಪ್ಪನ ರಟ್ಟೆ ಹಿಡಿದು ಪಕ್ಕಕ್ಕೆಳೆದು, 'ಲೇ ನಾರಾಯ್ಣಿ, ನೀನೇನ್ಲ ಅವುಳ್ಗೆ ಸಂಜಾಯಿಸೋದು. ಚಿಕ್ಕ ವಯಸ್ಗೆ ಗಂಡನ ಕಳ್ಕೊಂಡೋರ ಕಸ್ಟ ಅವಳ್ಗೇನು ಗೊತ್ತು. ನಾಳೇಕೇನಾರ ಎಚ್ಚಮ್ಮಿಯಾದ್ರೆ ಆವಾಕ ಗೊತ್ತಾಗುತ್ತೆ ಅವುಳ್ಗೆ... ನನ್ನ ಬಾಧೆ ಏನೂಂತ' ಎಂದು ನುಡಿದಿದ್ದಳು. ನಂಜಮ್ಮನ ಸೊಸೆ ಸರಸ್ವತಿಗೆ ಅಷ್ಟು ಸಾಕಾಗಿತ್ತು. ತನ್ನ ಗಂಡನ ಪಕ್ಕಕ್ಕೆ ಹೋಗಿ 'ನೋಡಿದ್ರೇನ್ರಿ ನಿಮ್ಮಾಯಿ ಏನ್ಮಾತಾಡ್ತಾವ್ರೆ. ತಾಯಿ ಹೇಳೊ ಮಾತ ಇದು. ನಿಮ್ಮನ್ನೆ ಸಾಯಿಸೋಕೆ ಹೊಂಟವ್ರೆ. ಎಂತಾ ಹೆಂಗ್ಸು ಇದು. ಈ ಮನೇಕೆ ಇನ್ಮೇಕೆ ನಾನೆಂದೂ ಬರಾಕಿಲ್ಲ ನಡೀರಿ ಹೋಗೂವ' ಎಂದು ನುಡಿದು ಗಂಟು ಮೂಟೆ ಕಟ್ಟಿದ್ದಳು. ಆಗ ನಂಜಮ್ಮ ಮಗನ ಕೈ ಹಿಡಿದು ಊರಿಂದ ಆಚೆ ಕರೆದುಕೊಂಡು ನಡೆದಿದ್ದಳು. ನಂಜಮ್ಮ ತನ್ನ ಗಂಡನನ್ನು ಪುಸುಲಾಯಿಸಿ ಎಲ್ಲಿ ತನಗೇ ವಿರುದ್ಧ ಎತ್ತಿಕಟ್ಟುತ್ತಾಳೊ ಎಂದು ಸರಸ್ವತಿ ಆತಂಕಗೊಂಡಿದ್ದಳು. ನಂಜಮ್ಮ ಮಗನನ್ನು ಊರ ಓವರ್ ಹೆಡ್ ಟ್ಯಾಂಕಿನ ಬಳಿ ಕರೆದೊಯ್ದು, 'ನೋಡು ಮೊಕ, ಸೊಸಿ ಗಟ್ಟಿಗಿತ್ತಿ ಅವ್ಳೆ. ಸಂಸಾರ ನಡೆಸೊ ತಾಕತ್ತೈತಿ ಅವಳಾಕ. ನೀನ್ ನನ್ನ ಬಗ್ಗಿ ಚಿಂತಿ ಮಾಡ್ಬೇಡ. ಅವುಳ್ಗೆ ಇಷ್ಟ ಇಲ್ಲಾಂದ್ರೆ ಇಲ್ಲಿ ಬರೋದು ಬೇಡ. ನೀ ಯಾವಾಕ್ಲಾರ ಬರ್ತಿರು. ಸುಮ್ಕೆ ಊರ್ನಾಕ ಪಂಚಾಯ್ತಿ ಯಾಕೆ. ಕರ್ಕೊಂಡು ವಂಟ್ಬಿಡು' ಎಂದು ನುಡಿದಿದ್ದಳು. ಅವನು, 'ಅವುಳ್ ಕಷ್ಟ ಪಡ್ಲಿ ಅಂತ ನಾನ್ ಸಾಯೊ ಮಾತಾಡ್ದಲ್ಲವ್ವ ನೀನು. ನಿಂಕೆ ಸರಿ ಕಾಣುತ್ತ' ಎಂದು ನುಡಿದಿದ್ದ. ಅವಳು ಮಗನ ಮುಖವನ್ನೆ ದಿಟ್ಟಿಸಿ ನೋಡಿದ್ದಳು. ಅವನು ತಲೆ ತಗ್ಗಿಸಿದ್ದ. ಮತ್ತೆ ತನ್ನ ಮಗನ ಕೈ ಹಿಡಿದ ಅವಳು ಮನೆಗೆ ನಡೆದು ಸೊಸೆಗೆ, 'ನೀನು ನಿನ್ಗಂಡನ್ನ ಕರ್ಕೊಂಡು ವೊಂಟೋಗು. ಇಲ್ಯಾರೂ ಬರೋದು